**ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ 28-10-2021**

**ಪಾಟೀ ಸವಾಲು - ವಾದಿಗಳ ಪರ ಶ್ರೀ. ಕೆ.ಎನ್.ಎಸ್., ವಕೀಲರಿಂದ**

2) ವಾದಿ ರಾಜಣ್ಣ ನನಗೆ ಅಣ್ಣನಾಗಬೇಕು, ರಮೇಶ ನನಗೆ ತಮ್ಮನಾಗಬೇಕು. ರತ್ನಮ್ಮ ನನಗೆ ತಂಗಿಯಾಗಬೇಕು. 1 ನೇ ಪ್ರತಿವಾದಿ ನನ್ನ ತಂದೆ ಇದ್ದು, ಈಗ ನನ್ನ ತಂದೆ ಮೃತಪಟ್ಟಿದ್ದಾರೆ. 4 ನೇ ಪ್ರತಿವಾದಿ ಮುನಿನಾರಾಯಣಪ್ಪ ನಮ್ಮ ಕುಟುಂಬಕ್ಕೆ ಸೇರಿರುವ ವ್ಯಕ್ತಿಯಲ್ಲ. ದಾವಾ ಸ್ವತ್ತನ್ನು ನಾವು ಯಾರಿಗೂ ಮಾರಾಟ ಮಾಡಿಲ್ಲ. ನನಗೆ 5 ನೇ ಪ್ರತಿವಾದಿ ಅರವಿಂದ್ ಪಾರೇಕರ್ ಯಾರು ಎಂದು ಗೊತ್ತಿರುವುದಿಲ್ಲ. ನಿ.ಪಿ.2 ರಲ್ಲಿ ವೆಂಕಟರೆಡ್ಡಿ ಎಂದು ಸಹಿ ಮಾಡಿರುವ ವ್ಯಕ್ತಿ ನಾನಲ್ಲ. ನಿ.ಪಿ.2 ರಲ್ಲಿ ಕಂಡುಬರುವ ವೆಂಕಟರೆಡ್ಡಿ ಎಂಬ ವ್ಯಕ್ತಿಯ ಫೋಟೋ ನನ್ನದಲ್ಲ, ಯಾರೋ ಫೋರ್ಜರಿ ಮಾಡಿದ್ದಾರೆ. ನಾನು 4 ನೇ ಪ್ರತಿವಾದಿಯನ್ನು ಮೇಲೇ ಹೇಳಿದ ಫೋರ್ಜರಿ ಆದ ನಂತರ ನೋಡಿದ್ದೆ, ಅದಕ್ಕೆ ಮುಂಚೆ ನೋಡಿರಲಿಲ್ಲ. ನಿ.ಪಿ.2 ರಲ್ಲಿರುವ ಹೆಬ್ಬೆಟ್ಟಿನ ಗುರುತು ನನ್ನದಲ್ಲ. ನಿ.ಪಿ.2 ರಲ್ಲಿರುವ ಕ್ರಯದಾರರ ಫೋಟೋ ಯಾರದು ಎಂದರೆ 4 ನೇ ಪ್ರತಿವಾದಿ ಮುನಿ ನಾರಾಯಣಪ್ಪನದು ಇರುತ್ತದೆ. ನಾನು ನಿ.ಪಿ.2 ಕ್ರಯಪತ್ರಕ್ಕೆ ಪಕ್ಷಕಾರನಾಗಿರುವುದಿಲ್ಲ. ನನಗೆ ಈ ದಾವೆಯಲ್ಲಿ ವಾದಿಗಳು ಮತ್ತು ಉಳಿದ ಪ್ರತಿವಾದಿಗಳಿಗೆ ಪಾಲು ವಿಭಾಗ

ಕೊಡಲಿಕ್ಕೆ ಆಕ್ಷೇಪಣೆ ಇರುವುದಿಲ್ಲ. 1 ನೇ ವಾದಿ ನಿ.ಪಿ.2 ರಲ್ಲಿ ಇರುವ ಕ್ರಯಪತ್ರವನ್ನು ಫೋರ್ಜರಿ ಮಾಡಿದ್ದಾರೆಂದು 1 ನೇ ಪ್ರತಿವಾದಿ ಮತ್ತು 4 ನೇ ಪ್ರತಿವಾದಿ ವಿರುದ್ಧ ಪೋಲೀಸ್ ದೂರು ಕೊಟ್ಟಿದ್ದಾರೆ ಎಂದರೆ ಸರಿ. ಸದರಿ ಪ್ರಕರಣ ಇನ್ನೂ ವಿಚಾರಣೆಯಲ್ಲಿದೆ ಎಂದರೆ ಸರಿ. ದಾವಾ ಸ್ವತ್ತಿನ ಸ್ವಾಧೀನದಲ್ಲಿ ನಾವೇ ಅಣ್ಣ ತಮ್ಮಂದಿರುಇದ್ದೇವೆ. 5 ನೇ ಪ್ರತಿವಾದಿ ಯಾವತ್ತೂ ದಾವಾ ಸ್ವತ್ತಿನ ಸ್ವಾಧೀನಕ್ಕೆ ಬಂದಿರುವುದಿಲ್ಲ. ದಾವಾ ಸ್ವತ್ತಿನಲ್ಲಿ ಈ ಬಾರಿ ವ್ಯವಸಾಯ ಮಾಡಲು ಅದರಲ್ಲಿದ ನೀಲಗಿರಿ ಬುಡಗಳನ್ನು ತೆರವು ಮಾಡಿದ್ದೇವೆ, ಮಳೆ ಹೆಚ್ಚಾಗಿರುವ ಕಾರಣ ಹುರುಳಿ ಬೆಳೆಯಲು ನಿರ್ಧರಿಸಿದ್ದೇವೆ.

**(5 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಪಾಟಿ ಸವಾಲನ್ನು ಮುಂದೂಡಿತು).**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,

ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ದೇವನಹಳ್ಳಿ.